ಶ್ರೀ ಎಸ್. ಬಂಗಾರಪ್ಪ. (ಕೃಷಿ ಮತ್ತು ತೋಟಗಾರಿಕೆ ಸಚಿವರು)—

ಅ) ಇಲ್ಲ

ಆ) ಇಲ್ಲ.

ಇ) ಕಳೆದ ೩ ವರ್ಷಗಳಿಂದ ಸರ್ಕಾರವು ಈ ಕೆಳಕಂಡಂತೆ ಅನುದಾನವನ್ನು ನೀಡಿದೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

	೧೯೮೭-೮೮ (ಲಕ್ಷಗಳಲ್ಲಿ)	೧೯೮೮-೮೯ (ಲಕ್ಷಗಳಲ್ಲಿ)	೧೯೮೯-೯೦ (ಲಕ್ಷಗಳಲ್ಲಿ)
ಅ) ಬ್ಲಾಕ್ ಅನುದಾ	೭೧೨.೦೦	೯೨೫.೦೦	೮೬೭.೭೮
ಆ) ಅಭಿವೃದ್ಧಿ ಅನುದಾನ	೧೪೫.೦೦	೧೪೮.೦೦	೧೭೦.೦೦

ಕೃಷಿ ವಿಶ್ವವಿದ್ಯಾನಿಲಯ ಧಾರವಾಡ

ಅ) ಬ್ಲಾಕ್ ಅನುದಾನ	೩೫೭.೦೦	೪೧೮.೦೦	೩೭೫.೭೭
ಆ) ಅಭಿವೃದ್ಧಿ ಅನುದಾನ	೯೫.೦೦	೧೪೩.೦೦	೧೯೫.೦೦

ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಹಂಚಿಕೆ

೧೯೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಹಂಚಿಕೆ ಕಾರ್ಯಕ್ರಮ ಜಾರಿಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ೧೯೮೭-೮೮, ೧೯೮೮-೮೯, ಮತ್ತು ೧೯೮೯-೯೦ರಲ್ಲಿ ಆಗಿರುವ ವಿಚ್ರ್ಯು ಎಷ್ಟು?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಸಧ್ಯದಲ್ಲೇ ಸರ್ಕಾರದ ನಿರ್ಧಾರವನ್ನು ತಿಳಿಸಲಾಗುವುದು.

ಆ) ಈ ಯೋಜನೆಗೆ ಈ ಕೆಳಕಂಡಂತೆ ಹಣವನ್ನು ವಿಚ್ರ್ಯು ಮಾಡಲಾಗಿರುತ್ತದೆ.

೧೯೮೭-೮೮ ರೂ. ೯,೧೪,೨೭,೦೦೦-೦೦

೧೯೮೮-೮೯ ರೂ. ೫,೮೭,೦೭,೦೦೦-೦೦

೧೯೮೯-೯೦ ರೂ. ೬.೮೦,೮೫, ೫೧-೦೦

ಪಠ್ಯಪುಸ್ತಕಗಳ ಬದಲಾವಣೆ

೧೯೦. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈ ಶೈಕ್ಷಣಿಕ ವರ್ಷದಲ್ಲಿ ಯಾವ ಯಾವ ತರಗತಿಯ ಪಠ್ಯ ಪುಸ್ತಕಗಳನ್ನು ಬದಲಾಯಿಸಲಾಗಿದೆ.

ಆ) ಹಾಗಿದ್ದಲ್ಲಿ, ಬದಲಾದ ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗಿದೆಯೇ?

ಇ) ಮುದ್ರಿಸದಿದ್ದರೆ ಯಾವಾಗ ಮುದ್ರಿಸಿ ವಿದ್ಯಾರ್ಥಿಗಳಿಗೆ ಒದಗಿಸಲಾಗುವುದು.

ಶ್ರೀ ಕೆ. ಪಿಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಈ ಶೈಕ್ಷಣಿಕ ವರ್ಷದಲ್ಲಿ ಯಾವುದೇ ತರಗತಿಯ ಪಠ್ಯ ಪುಸ್ತಕವನ್ನು ಬದಲಾಯಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮುದ್ದೆಬೀಹಾಳ ಶಹರಕ್ಕೆ ಕುಡಿಯಲಿರುವ ನೀರಿನ ಯೋಜನೆ ಬಗ್ಗೆ

೧೬೮. ಶ್ರೀ ಸಿ. ಎಸ್. ನಾಡಗೌಡ .—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುದ್ದೇಬಿಹಾಳ (ಶಹರಕ್ಕೆ) ಕುಡಿಯುವ ನೀರಿನ ಯೋಜನೆ ತಯಾರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ತಯಾರಿಸಲಾಗಿದೆ ಮತ್ತು ಈಗ ಯಾವ ಹಂತದಲ್ಲಿದೆ?

ಇ) ಈ ಯೋಜನೆಯು ಯಾವಾಗ ಪೂರ್ತಿಗೊಳ್ಳುವುದು.

ಈ) ಈ ಯೋಜನೆ ಪೂರ್ಣಗೊಳ್ಳುವವರೆಗೆ ಕುಡಿಯುವ ನೀರಿನ ಭವಣೆಯನ್ನು ಪರಿಹರಿಸಲು ವುದಕ್ಕೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಸಚಿವರು).—

ಅ) ತಯಾರಿಸಲಾಗಿದೆ.

ಆ) ಯೋಜನೆಯನ್ನು ೧೯೮೨ರಲ್ಲಿ ತಯಾರಿಸಲಾಗಿದೆ. ಈಗ ಎರು ಕೊಳವೆ ಮಾರ್ಗ ಮತ್ತು ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ಪೂರ್ಣಗೊಳಿಸಲಾಗಿದೆ ಮಂಡಲ ಸ್ಥಾವರದ ಕೆಲಸಗಳು, ಪಂಪಿಂಗ್ ಯಂತ್ರೋಪಕರಣಗಳನ್ನು ಅಳವಡಿಸುವುದು ಮತ್ತು ಶುದ್ಧೀಕರಣ ಘಟಕದ ಕೆಲಸಗಳು ಪ್ರಗತಿಯಲ್ಲಿವೆ ವಿತರಣಾ ಜಾಲದ ಬಾಕಿ ಕೆಲಸವನ್ನು ಶೀಘ್ರದಲ್ಲಿ ಆರಂಭಿಸಲಾಗುವುದು.

ಇ) ಈ ಯೋಜನೆಯು ೧೯೯೧ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಈ) ಸೂಕ್ತ ಕ್ರಮವನ್ನು ಈಗಾಗಲೇ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ಕೈಗೊಂಡಿದೆ.

ಕಬಿನಿ ಜಲಾಶಯದ ಮುಂದೆ ಇರುವ ಜಮೀನನ್ನು ಉಪಯೋಗಿಸದೆ ಇರುವುದು

೧೬೯. ಶ್ರೀ ಎಂ. ಪಿ. ವೆಂಕಟೇಶ್ (ಪಿಚ್.ಡಿ. ಕೋಟೆ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಜಲಾಶಯದ ಮುಂದೆ ತೋಟಗಾರಿಕೆ ಇಲಾಖೆಯವರು ಸಸಿಗಳನ್ನು ಹಾಕಿದ್ದಾರೆಯೇ?

ಆ) ಹಾಗಿಲ್ಲದಿದ್ದಲ್ಲಿ, ಕಬಿನಿ ಜಲಾಶಯದ ಮುಂಭಾಗದಲ್ಲಿರುವ ಸ್ಥಳವನ್ನು ಉಪಯೋಗಿಸದೆ ಪಾಳು ಬಿಟ್ಟಿರಲು ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಇಲ್ಲ.

ಆ) ಸದರಿ ಪ್ರದೇಶವು ನೀರಾವರಿ ಇಲಾಖೆಯ ಸ್ವಾಧೀನದಲ್ಲಿದೆ. ಸರ್ಕಾರವು ಇಂತಹ ಅಚ್ಚುಕಟ್ಟು ಪ್ರದೇಶಗಳಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸಲು ಲೋಕೋಪಯೋಗಿ, ಕಾಡಾ ಮತ್ತು ವಿದ್ಯುಚ್ಛಕ್ತಿ ಇಲಾಖೆ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಅದರ ಶಿಫಾರಸ್ಸುಗಳನ್ನು ನಿರೀಕ್ಷಿಸಲಾಗುತ್ತಿದೆ.